ಎರಡು ಮಕ್ಕಳು. ಅವಳೂ ಸಿನಿಮಾದಲ್ಲಿ ಸೈಡ್‌ರೋಲ್ಸ್ ಮಾಡ್ತಿರ್ತಾಳೆ' ಅಂದು ಖಿನ್ನನಾದ. ನನಗೇನಂತಹ ನಿರಾಶೆಯಾಗಲಿಲ್ಲ. 'ಸುಮ್ನೆ ತಮಾಷೆ ಮಾಡಿದ್ನಪ್ಪ. ಯಾವ ಯಮಗಂಡನ ಸಹವಾಸವೂ ನನಗೆ ಬೇಡ ಮಾರಾಯ' ನಕ್ಕೆ. ಅವನಂತೂ ನಗಲಿಲ್ಲ. ಕುಗ್ಗಿ ಹೋದನೋ ಕುದ್ದು ಹೋದನೋ. ಮೌನಿಯಾಗಿಬಿಟ್ಟ. ಇಬ್ಬರೂ ಕೂತಲ್ಲೇ ಸಾಯುತ್ತಿದ್ದೇವೆಂದು ಅನ್ನಿಸಿದ್ದರಿಂದ ನಾನೇ ನಿಧಾನವಾಗಿ ಮೇಲೆದ್ದು ಹೊರಟೆ. ಹಿಂಬಾಲಿಸಿದ. ಕಾರು ಈಚೆ ತೆಗೆದು ಕುಳಿತೆ. 'ಈಗ್ಲೂ ವಿಜಯನಗರದಲ್ಲಿದಿಯಾ? ಡ್ರಾಪ್ ಮಾಡ್ಲಾ?' ಕನಿಕರಿಸಿದೆ. 'ನೋ... ಥ್ಯಾಂಕ್ಸ್' ತಲೆಕೊಡವಿದ. 'ಇನ್ನೂ ಸ್ಕೂಟರ್ ತಗೊಳ್ಳಿಲ್ವೆ ಡೈರಕ್ಟರು?' ತಮಾಷೆ ಮಾಡಿದೆ. ಅವನು ನಗಲಿಲ್ಲ.

'ನಮ್ಮದು ವಿನೋಬಾ ಭಾವೆ ಟ್ರಾನ್ಸ್‌ಪೋರ್ಟ್' ಅನ್ನುತ್ತಾ ಕೈ ಆಡಿಸಿದ.

★★★

ಅವಳು ಮರೆಯಾಗುವವರೆಗೂ ಕೈ ಆಡಿಸುತ್ತಲೇ ಇದ್ದ. ಅವನ ಕೈಕಾಲುಗಳಲ್ಲಿನ ಜಂಘಾಬಲ ಹುದುಗಿತ್ತು. ಏನೆಲ್ಲಾ ಅವಳ ಬಳಿ ಹೇಳಿಕೊಂಡು ಅತ್ತುಬಿಡಬೇಕೆನಿಸಿತ್ತು ಅವನಿಗೆ. ಮದುವೆಯಾಗಿದೆ. ಎರಡು ಮಕ್ಕಳಿವೆಯೆಂದು ಬೇಕೆಂದೇ ಸುಳ್ಳು ಹೇಳಿ, ಅವಳ ಮನದಲ್ಲಿ ಮೊಳಕೆಯೊಡೆಯುತ್ತಿದ್ದ ಆಶೆಯನ್ನೂ ಚಿವುಟಿದ್ದ. ಅದಕ್ಕೂ ಕಾರಣವಿತ್ತು. ಅವನೀಗ ಕ್ಯಾನ್ಸರ್ ಪೇಶಂಟ್. ತನಗೆ 'ಲಂಗ್‌ಕ್ಯಾನ್ಸರ್' ಅಂತ ಅವಳಿಗೆ ಗೊತ್ತಾಗಿದ್ದರೆ ಹೀಗೆ ಅವಳು ಖುಷಿಯಾಗಿ ನಗುತ್ತಾ ಹೋಗುತ್ತಿದ್ದಳಾ? ದೇವರು ನಿಷ್ಕರುಣಿ. ಎರಡನೆ ಬಾರಿಯೂ ನಾನೂ ಅವಳು ಒಂದಾಗುವ ಅವಕಾಶವನ್ನು ತಪ್ಪಿಸಿಬಿಟ್ಟ. ಅವಳು ಬೇರೆ ಯಾರನ್ನಾದರೂ ಮದುವೆಯಾಗಿ ಸುಖವಾಗಿರಲಿ. ಅವಳಿಗೆ ಮತ್ತೆಂದೂ ಮುಖ ತೋರಿಸಬಾರದೆಂದುಕೊಂಡ. ಕಿದ್ವಾಯ್ ಆಸ್ಪತ್ರೆಯಿಂದ ಹೊರಬಂದು ಸಿಟಿಬಸ್ ಸ್ಟಾಪ್‌ನತ್ತ ಹೆಜ್ಜೆ ಹಾಕಿದ.

ಅವಳೂ ಹಾಗೆಯೇ ಯೋಚಿಸಿದಳು. ಅವನೀಗ ಗೃಹಸ್ಥ. ಭಾವಿ ನಿರ್ದೇಶಕ. ಅವನಾದರೂ ಸುಖವಾಗಿರಲಿ. ತಾನು 'ಬ್ಲಡ್‌ಕ್ಯಾನ್ಸರ್' ರೋಗಿಯೆಂದು ತಿಳಿದರೆ ಸತ್ತೇ ಹೋದಾನು. ಅವನ ಮೊಬೈಲ್ ನಂಬರ್‌ನಾದರೂ ತಿಳಿದುಕೊಳ್ಳಬೇಕಿತ್ತು. ಅವನೂ ಹೇಳಲಿಲ್ಲ ಕಳ್ಳ. ಜಗತ್ತನ್ನೇ ಬಿಡಲಿರುವ ತನಗೇಕೆ ಈ ಪರಿ ವ್ಯಾಮೋಹ!? ತನ್ನಲ್ಲಿ ತಾನೇ ನಗುತ್ತಾ ಕಾರಿನ ವೇಗ ಹೆಚ್ಚಿಸಿದಳು.


## ಬಿ.ಎಲ್. ವೇಣು

ನಾಲ್ಕು ದಶಕಗಳಿಂದ ಕತೆ, ಕಾದಂಬರಿ, ಸಿನಿಮಾ–ಧಾರಾವಾಹಿಗಳ ಕತೆ, ಸಂಭಾಷಣೆಗಳ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಲೇಖಕ ಬಿ.ಎಲ್. ವೇಣು. ಏಳು ಐತಿಹಾಸಿಕ ಕಾದಂಬರಿಗಳು ಸೇರಿದಂತೆ 29 ಕಾದಂಬರಿಗಳನ್ನು ಬರೆದಿದ್ದಾರೆ. ಅವರ ಐತಿಹಾಸಿಕ ಕಾದಂಬರಿ 'ಗಂಡುಗಲಿ ಮದಕರಿನಾಯಕ' ಅಪಾರ ಜನಮನ್ನಣೆ ಗಳಿಸಿದೆ. 'ಲೋಕದಲ್ಲಿ ಜನಿಸಿದಾ ಬಳಿಕ...' ಅವರ ಆತ್ಮಕತೆ. ಅವರ ಸುಮಾರು 45 ಕೃತಿಗಳು ಪ್ರಕಟಗೊಂಡಿದ್ದು, 11 ಕೃತಿಗಳು ಸಿನಿಮಾ ಆಗಿವೆ. ಆರೋಗ್ಯ ಇಲಾಖೆಯಲ್ಲಿ ಕಚೇರಿ ಅಧೀಕ್ಷಕರಾಗಿ ನಿವೃತ್ತರು.